## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ, ಇವರ ವಿರುದ್ಧದ ಶಿಸ್ತು ಕ್ರಮ ಅಂತಿಮ ಆದೇಶ.

ಓದಲಾಗಿದೆ:- 1) ಮಾನ್ಯ ಉಪ ಲೋಕಾಯುಕ್ತ ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿ ಸಲ್ಲಿಸಿರುವ ವರದಿ ಸಂಖ್ಯೆ: ಕಂಪ್ಲೇಟ್/ ಉಪಲೋಕ್/ಬಿಡಿ-1771/2012/ಎಆರ್ಎಲ್ಒ-2, ದಿ 20.11.2012.

2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 224 ವಿಸೇಬಿ 2013 ದಿ:22.02.2013.

3) ಮಾನ್ಯ ಉಪ ಲೋಕಾಯುಕರು, ಇವರ ವರದಿ ಸಂಖ್ಯೆ:ಲೋಕ್/ಎಅರ್ಇ-10/14ಎ/ಇಎನ್ ಕ್ಯೂ-166/2013 ದಿ:05.08.2015.

4) ಎರಡನೇ ಕಾರಣ ಕೇಳುವ ನೋಟೀಸ್ ದಿ:05.09.2015.

5) ಶ್ರೀ ಹೆಚ್.ಡಿ.ಮಹಾಲಿಂಗಯ್ಯ ಇವರ ಲಿಖಿತ ಹೇಳಿಕೆ ದಿ:28.10.2015.

-------

ಪ್ರಸ್ತಾವನೆ:-

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಚಿಕ್ಕದಾಳವಟ ಗ್ರಾಮ ಪಂಚಾಯತಿಯಲ್ಲಿ ಜಲ ಸಂರಕ್ಷಣೆ ಯೋಜನೆಯಡಿ 130 ಕ್ವಿಂಟಲ್ ಅಕ್ಕಿಯನ್ನು ದುರುಪಯೋಗಪಡಿಸಿಕೊಂಡು ಅವ್ಯವಹಾರದಲ್ಲಿ ಭಾಗಿಯಾಗಿರುವ ಕಾರ್ಯದರ್ಶಿ, ಚಿಕ್ಕದಾಳವಟ ಗ್ರಾಮ ಪಂಚಾಯತಿ, ಮಧುಗಿರಿ ತಾಲ್ಲೂಕು ಇವರ ವಿರುದ್ಧ ಶ್ರೀ ಜೆ. ಆರ್. ತಿಮ್ಮರೆಡ್ಡಿ, ಬಿನ್ ರಾಮರೆಡ್ಡಿ, ಜನಕಲೋಟ ಗ್ರಾಮ ಪಂಚಾಯತಿ, ಮಧುಗಿರಿ ತಾಲ್ಲೂಕು ಇವರು ಲೋಕಾಯುಕ್ತ ಕಛೇರಿಯಲ್ಲಿ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ, ತನಿಖೆ ನಡೆಸಿ, ವಿವರವಾದ ವರದಿಯನ್ನು ಸಲ್ಲಿಸಲು ಶ್ರೀ ಹೆಚ್. ಡಿ. ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮಧುಗಿರಿ ಇವರಿಗೆ ದಿನಾಂಕ 24.02.2006ರಲ್ಲಿ ಪತ್ರ ಬರೆದು ನಂತರ ನೆನಪೋಲೆಗಳನ್ನು ಕಳುಹಿಸಿದರು ಸಹ ವರದಿ ಸಲ್ಲಿಸಿರುವುದಿಲ್ಲ. ತದನಂತರ ದಿನಾಂಕ 17.03.2011, 03.12.2012ರಂದು ಕಾರಣ ಕೇಳುವ ನೋಟೀಸಿಗೆ ಉತ್ತರ ನೀಡಲು ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಸದರಿ ಕರ್ತವ್ಯಲೋಪಕ್ಕೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ)ರನ್ವಯ ಪ್ರಕರಣವನ್ನು ಮೇಲಿನ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ದಿನಾಂಕ 20.11.2013ರ ಆದೇಶದಲ್ಲಿ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿತ್ತು.

ಸದರಿ ಅದೇಶದನುಸಾರ ಮಾನ್ಯ ಉಪ ಲೋಕಾಯುಕ್ತರವರು ಅಪರ ನಿಬಂಧಕರು, ವಿಚಾರಣೆಗಳು-10 ಇವರನ್ನು ವಿಚಾರಣಾಧಿಕರಿಯನ್ನಾಗಿ ನೇಮಿಸಿರುತ್ತಾರೆ. ವಿಚಾರಣಾಧಿಕರಿಯವರು ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತುಮಕೂರು ಇವರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ವಿವರವಾಗಿ ವಿಚಾರಣೆ ನಡೆಸಿ, ವರದಿಯನ್ನು ಮಾನ್ಯ ಉಪ ಲೋಕಾಯುಕ್ತರಿಗೆ ದಿನಾಂಕ 31.07.2015ರಂದು ಸಲ್ಲಿಸಿದ್ದು, ಮಾನ್ಯ ಉಪ ಲೋಕಾಯುಕ್ತರು ಮೇಲೆ ಕ್ರಮ

ಸಂಖ್ಯೆ(3)ರಲ್ಲಿ ಓದಲಾದ ದಿನಾಂಕ 05.08.2015ರ ಪತ್ರದೊಂದಿಗೆ ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಆಪಾದಿತ ಅಧಿಕಾರಿಯ ವಿರುದ್ಧ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಿಲ್ಲದಂತೆ ಮೂರು ವರ್ಷಗಳವರೆಗೆ ತಡೆಹಿಡಿಯುವ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ, ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸು ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಇವರು ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಚಿಕ್ಕದಾಳವಟ ಗ್ರಾಮ ಪಂಚಾಯತಿಯಲ್ಲಿ ಜಲ ಸಂರಕ್ಷಣೆ ಯೋಜನೆಯಡಿ 130 ಕ್ವಿಂಟಲ್ ಅಕ್ಕಿಯನ್ನು ದುರುಪಯೋಗ ಪಡಿಸಿಕೊಂಡು ಅವ್ಯವಹಾರದಲ್ಲಿ ಭಾಗಿಯಾಗಿರುವ ಕಾರ್ಯದರ್ಶಿ, ಚಿಕ್ಕದಾಳವಟ ಗ್ರಾಮ ಪಂಚಾಯತಿ, ಮಧುಗಿರಿ ತಾಲ್ಲೂಕು ಇವರ ವಿರುದ್ಧ ಶ್ರೀ ಜೆ. ಆರ್. ತಿಮ್ಮರೆಡ್ಡಿ, ಬಿನ್ ರಾಮರೆಡ್ಡಿ, ಜನಕಲೋಟ ಗ್ರಾಮ ಪಂಚಾಯತಿ, ಮಧುಗಿರಿ ತಾಲ್ಲೂಕು ಇವರು ಲೋಕಾಯುಕ್ತ ಕಛೇರಿಯಲ್ಲಿ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ, ತನಿಖೆ ನಡೆಸಿ, ವಿವರವಾದ ವರದಿಯನ್ನು ಸಲ್ಲಿಸಲು ಸೂಚನೆ ನೀಡಿದ್ದರು ಸಹ ಅವರ ಉತ್ತರ ಸಲ್ಲಿಸಲು ವಿಫಲರಾಗಿರುವ ಕಾರಣ ಸದರಿಯವರಿಗೆ ದಿನಾಂಕ 17.03.2011 ಮತ್ತು 03.12.2012ರಂದು ಕಾರಣ ಕೇಳುವ ನೋಟೀಸ್ ನೀಡಿ ಏಕೆ ಶಿಸ್ತಿನ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ತಿಳಿಸಲಾಗಿದ್ದರೂ ಸಹ ಆಪಾದಿತರು ಯಾವುದೇ ಉತ್ತರ ಸಲ್ಲಿಸದೆ ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ತೋರದೆ ಕರ್ತವ್ಯಲೋಪವೆಸಗಿ, ನಡತೆ ನಿಯಮಗಳ ನಿಯಮ 3(1)(i) ರಿಂದ (iii)ನ್ನು ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುತ್ತಾರೆಂದು ಆರೋಪಿಸಲಾಗಿದೆ.

ಮೇಲೆ ಕ್ರಮಸಂಖ್ಯೆ(4)ರಲ್ಲಿ ಓದಲಾದ ದಿನಾಂಕ 05-09-2015ರಂದು ಶ್ರೀ ಹೆಚ್.ಡಿ. ಮಹಾಲಿಂಗಯ್ಯ ಇವರಿಗೆ ವಿಚಾರಣಾ ವರದಿ ಹಾಗೂ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನ ಪತ್ರದೊಂದಿಗೆ 2ನೇ ಕಾರಣ ಕೇಳುವ ನೋಟಿಸಿನೊಂದಿಗೆ ಜಾರಿ ಮಾಡಿ, ವಿವರಣೆಯನ್ನು ಕೋರಲಾಗಿತ್ತು. ಸದರಿ ನೋಟೀಸಿಗೆ ಶ್ರೀಯುತರು ದಿನಾಂಕ 28.10.2015ರಂದು ಸರ್ಕಾರಕ್ಕೆ ವಿವರಣೆಯನ್ನು ಸಲ್ಲಿಸುತ್ತಾ, ವಿಚಾರಣಾಧಿಕಾರಿಯವರು ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಆರೋಪ ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ, ಹಾಗೂ ವಿಚಾರಣಾಧಿಕಾರಿಗಳ ಮುಂದೆ ಮಂಡಿಸಿರುವ ತಮ್ಮ ವಾದವನ್ನು ಪರಿಗಣಿಸಿರುವುದಿಲ್ಲ. ಮಾನ್ಯ ಲೋಕಾಯುಕ್ತ ಕಚೇರಿಯಿಂದ ಕಳುಹಿಸಿರುವ ನೋಟೀಸಿಗೂ ಸಹ ದಿನಾಂಕ 30.07.2012ರಂದು ಉತ್ತರವನ್ನು ಸಲ್ಲಿಸಿದ್ದು, ಸದರಿ ವರದಿಯು ಲೋಕಾಯುಕ್ತ ಕಚೇರಿಯಲ್ಲಿ ಸ್ವೀಕೃತವಾಗಿದ್ದರೂ ಅದನ್ನು ಪರಿಗಣಿಸದೇ ತಾವು ವರದಿಯನ್ನು ಸಲ್ಲಿಸಿಲ್ಲವೆಂದು ಪರಿಗಣಿಸಿ, ಆರೋಪ ರುಜುವಾತಾಗಿದೆ ಎಂದು ನಿರ್ಣಯಿಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ತಮ್ಮ ವಿವರಣೆಯನ್ನು ಪರಿಗಣಿಸಿ, ಆರೋಪವನ್ನು ಕೈಬಿಡಲು ಕೋರಿರುತ್ತಾರೆ.

ಆಪಾದಿತ ಅಧಿಕಾರಿಯು ದಿನಾಂಕ: 30-07-2012ರಂದು ಲೋಕಾಯುಕ್ತ ಕಛೇರಿಗೆ ಕಳುಹಿಸಿದ್ದರೆನ್ನಲಾದ ವರದಿಯು ಲೋಕಾಯುಕ್ತ ಕಛೇರಿಗೆ ತಲುಪಿದ ಬಗ್ಗೆ ಯಾವುದೇ ಸ್ವೀಕೃತಿಯನ್ನು ವಿಚಾರಣಾ ಅಧಿಕಾರಿಗಳ ಮುಂದೆ ಮಂಡಿಸದ ಕಾರಣ, ಸದರಿ ವಿವರಣೆಯನ್ನು ವಿಚಾರಣಾ ಅಧಿಕಾರಿಗಳು ಪರಿಗಣಿಸಿರುವುದಿಲ್ಲ. ಹಾಗಾಗಿ ಆಪಾದಿತ ಅಧಿಕಾರಿಯು ಲೋಕಾಯುಕ್ತ ಕಛೇರಿಯು ಕೋರಿದಂತೆ, ವರದಿಯನ್ನು ಸಲ್ಲಿಸಲು ವಿಫಲರಾಗಿದ್ದಾರೆ ಎಂಬ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುತ್ತದೆ. ಪ್ರಸ್ತುತ ಶ್ರೀ ಹೆಚ್.ಡಿ.ಮಹಾಲಿಂಗಯ್ಯ ಇವರು ಸರ್ಕಾರಕ್ಕೆ ಸಲ್ಲಿಸಿರುವ ವಿವರಣೆಯಲ್ಲಿ

ದಿನಾಂಕ: 30-07-2012 ರಂದು ಕಳುಹಿಸಿರುವ ವರದಿಯ ಪ್ರತಿಯನ್ನು ಲಗತ್ತಿಸಿದ್ದರೂ ಸಹ, ಸದರಿ ವರದಿಯು ಲೋಕಾಯುಕ್ತ ಕಛೇರಿಗೆ ತಲುಪಿರುವ ಕುರಿತು ಯಾವುದೇ ಸ್ವೀಕೃತಿಯನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ ಸದರಿಯವರ ಲಿಖಿತ ವಿವರಣೆಯಲ್ಲಿ ಪರಿಗಣಿಸಬಹುದಾದ ಯಾವುದೇ ಅಂಶ ಕಂಡು ಬರುವುದಿಲ್ಲ.

ಸರ್ಕಾರವು ಮೇಲಿನ ವಿವರಗಳನ್ನು ಪರಿಶೀಲಿಸಿದ್ದು, ಪ್ರಕರಣದಲ್ಲಿ ಆಪಾದಿತರಾಗಿರುವ ಶ್ರೀ **ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ,** ಇವರು ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಚಿಕ್ಕದಾಳವಟ ಗ್ರಾಮ ಪಂಚಾಯತಿಯಲ್ಲಿ ಜಲ ಸಂರಕ್ಷಣೆ ಯೋಜನೆಯಡಿ 130 ಕ್ವಿಂಟಲ್ ಅಕ್ಕಿಯನ್ನು ದುರುಪಯೋಗ ಪಡಿಸಿಕೊಂಡು ಅವ್ಯವಹಾರದಲ್ಲಿ ಭಾಗಿಯಾಗಿರುವ ಕಾರ್ಯದರ್ಶಿ, ಚಿಕ್ಕದಾಳವಟ ಗ್ರಾಮ ಪಂಚಾಯತಿ, ಮಧುಗಿರಿ ತಾಲ್ಲೂಕು ಇವರ ವಿರುದ್ಧದ ಲೋಕಾಯುಕ್ತ ಕಚೇರಿಯಲ್ಲಿ ದಾಖಲಾದ ದೂರಿಗೆ ಸಂಬಂಧಿಸಿದಂತೆ, ವಿವರವಾದ ವರದಿ ಸಲ್ಲಿಸದೆ ಇರುವುದು ಹಾಗೂ ಈ ಬಗ್ಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ್ದರು, ನೋಟೀಸಿಗೆ ವಿವರಣೆ ಸಲ್ಲಿಸದೆ ಕರ್ತವ್ಯಲೋಪವೆಸಗಿರುವುದರಿಂದ ಸದರಿಯವರು ಎಸಗಿರುವ ಕರ್ತವ್ಯಲೋಪಕ್ಕೆ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಹೊಂದದಂತೆ 3 ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 211 ವಿಸೇಬಿ 2015 ಬೆಂಗಳೂರು ದಿನಾಂಕ: 24.02.2016.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ, ತುಮಕೂರು ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(111)ರಡಿ ಪ್ರದತ್ತವಾದ ಅಧಿಕಾರದನ್ವಯ **"ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಹೊಂದದಂತೆ 3 ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆ"**ಯನ್ನು ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/2/16
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗೆ:**

1) ಮಹಾಲೇಖಪಾಲರು (ಲೆಕ್ಕಪತ್ರ 1 &2) / (ಆಡಿಟ್), ಕರ್ನಾಟಕ, ಬೆಂಗಳೂರು.
2) ಅಪರ ನಿಬಂಧಕರು,ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ,ಬೆಂಗಳೂರು

3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು.
4) ಶ್ರೀ ಹೆಚ್.ಡಿ.ಮಹಾಲಿಂಗಯ್ಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಧುಗಿರಿ.ತುಮಕೂರು ಜಿಲ್ಲೆ.

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.